

ವಕಾರ್


ಫಾಫ್ ಡು ಪ್ಲೆಸಿಸ್


ಸಚಿನ್



ದ್ರಾವಿಡ್

ಬೆಳಕಿಗೆ ಬಂತು.

ಅದೇ ವರ್ಷ ಕರಾಚಿಯಲ್ಲಿ ಪಾಕಿಸ್ತಾನ ವಿರುದ್ಧ ನಡೆದ ಪಂದ್ಯದಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ ನ್ಯೂಜಿಲೆಂಡ್‌ನ ಕ್ರಿಸ್ ಪ್ರಿಂಗಲ್ ಚೆಂಡು ವಿರೂಪ ಮಾಡಿದ ಆರೋಪ ಹೊತ್ತಿದ್ದರು. ಪ್ರಿಂಗಲ್ ಮಾಡಿದ ತಪ್ಪು ಕ್ಯಾಮೆರಾದಲ್ಲಿಯೂ ಸೆರೆಯಾಗಿತ್ತು. 'ಯಾಕೆ ಹೀಗೆ ಮಾಡಿದಿರಿ' ಎನ್ನುವ ಪ್ರಶ್ನೆಗೆ 'ಎದುರಾಳಿ ಪಾಕಿಸ್ತಾನ ತಂಡದವರು ಇದೇ ಕೆಲಸ ಮಾಡುತ್ತಾರೆ ಎಂಬುದು ನನಗೆ ಗೊತ್ತು. ಅದಕ್ಕೆ ನಾನೇ ಮೊದಲು ಚೆಂಡು ವಿರೂಪಗೊಳಿಸಿದೆ' ಎಂದಿದ್ದರು! ಈ ಘಟನೆಯ ಬಳಿಕ ಐಸಿಸಿ ಪ್ರತಿ ಪಂದ್ಯಕ್ಕೂ ರೆಫರಿಯನ್ನು ನಿಯೋಜಿಸಲು ಆರಂಭಿಸಿತು.

1994ರಲ್ಲಿ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ವೇಳೆ ಇಂಗ್ಲೆಂಡ್ ತಂಡದ ನಾಯಕರಾಗಿದ್ದ ಮೈಕ್ ಅಥರ್ಟನ್ ಪ್ಯಾಂಟಿನ ಜೇಬಿನಿಂದ ವಸ್ತು ತೆಗೆದು ಚೆಂಡು ವಿರೂಪಗೊಳಿಸಿದ್ದು ಕ್ಯಾಮೆರಾದಲ್ಲಿ ದಾಖಲಾಗಿತ್ತು. ಆದರೆ ಇದನ್ನು ಅಥರ್ಟನ್ ಸುತಾರಾಂ ಒಪ್ಪಿಕೊಳ್ಳಲಿಲ್ಲ. ಹೊಲಸಾಗಿದ್ದ ಕೈಯನ್ನು ಶುದ್ಧ ಮಾಡಿಕೊಳ್ಳಲು ಜೇಬಿನಲ್ಲಿ ಕೈ ಹಾಕಿದ್ದೆ ಎಂದು ಸಮಜಾಯಿಷಿ ನೀಡಿದ್ದರು. ಇದನ್ನು ಒಪ್ಪದ ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ದಂಡ ವಿಧಿಸಿ ನಾಯಕತ್ವ ತ್ಯಜಿಸುವಂತೆ ತಾಕೀತು ಮಾಡಿತ್ತು. ಆದರೂ ಅವರು ನಾಲ್ಕು ವರ್ಷ ತಂಡದ ನಾಯಕರಾಗಿ ಮುಂದುವರಿದರು!

2000ದಲ್ಲಿ ಪಾಕಿಸ್ತಾನ ತಂಡ ಇಂಗ್ಲೆಂಡ್ ಎದುರು ಆಡುವಾಗ ಪಾಕ್ ತಂಡದ ವೇಗಿ ವಕಾರ್ ಯೂನಿಸ್ ಚೆಂಡು ವಿರೂಪ ಮಾಡಿದ್ದರು ಎಂಬುದನ್ನು ಬ್ರಿಟನ್ ಮಾಧ್ಯಮಗಳು ಬಹಿರಂಗಗೊಳಿಸಿದ್ದವು. ಪಂದ್ಯದ ರೆಫರಿ ನ್ಯೂಜಿಲೆಂಡ್‌ನ ಜಾನ್ ರೇಡ್, ಯೂನಿಸ್ ಅವರನ್ನು ಆಟವಾಡದಂತೆ ನಿಷೇಧಿಸಿ ಪಂದ್ಯದ ಶೇಕಡಾ 50ರಷ್ಟು ದಂಡ ವಿಧಿಸಿದ್ದರು. ಇದು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನಿಷೇಧ ಶಿಕ್ಷೆ ವಿಧಿಸಿದ ಮೊದಲ ಪ್ರಕರಣ. ಆದರೂ ಪಾಠ ಕಲಿಯದ ಪಾಕ್ ಆಟಗಾರರು ಶ್ರೀಲಂಕಾದಲ್ಲಿ ಜರುಗಿದ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಪಂದ್ಯದಲ್ಲಿಯೂ ಚೆಂಡು ವಿರೂಪ ಮಾಡಿದ್ದರು. ಆಗ ಪಾಕಿಸ್ತಾನ ತಂಡದ ನಾಯಕರಾಗಿದ್ದ ಮೊಯಿನ್ ಖಾನ್ ಮತ್ತು ಆಲ್‌ರೌಂಡರ್ ಅಜರ್ ಮಹಮೂದ್ ತಪ್ಪಿತಸ್ಥರಾಗಿದ್ದರೂ ಕಠಿಣ ಶಿಕ್ಷೆ ವಿಧಿಸಿರಲಿಲ್ಲ.

### ಕರಾಳ ನೆನಪು ಈಗಲೂ ಹಸಿರು

2006ರಲ್ಲಿ ನಡೆದ ಘಟನೆ ಈಗಲೂ ಕ್ರಿಕೆಟ್ ಇತಿಹಾಸದಲ್ಲಿ ಕರಾಳ ನೆನಪಾಗಿ ಉಳಿದುಕೊಂಡಿದೆ. ಪಾಕಿಸ್ತಾನದ ಆಟಗಾರರು ಚೆಂಡು ವಿರೂಪಗೊಳಿಸಿದ್ದಾರೆ ಎಂದು ಅಂಪೈರ್‌ಗಳು ತೀರ್ಮಾನಿಸಿ ಎದುರಾಳಿ ಇಂಗ್ಲೆಂಡ್ ತಂಡಕ್ಕೆ ಐದು ಪೆನಾಲ್ಟಿ ರನ್ ಕೊಟ್ಟಿದ್ದರು. ಇದರಿಂದ ಆಕ್ರೋಶಗೊಂಡಿದ್ದ ಇಂಜಮಾಮ್ ಉಲ್ ಹಕ್ ನೇತೃತ್ವದ ತಂಡ ದಿನದಾಟದ ಚಹಾ ವಿರಾಮದ ಬಳಿಕ ಮೈದಾನಕ್ಕೆ ಬರಲು ಒಪ್ಪಲಿಲ್ಲ. ಇದರಿಂದ ಅಸಮಾಧಾನಗೊಂಡಿದ್ದ ಅಂಪೈರ್‌ಗಳು ಇಂಗ್ಲೆಂಡ್ ತಂಡಕ್ಕೆ ಗೆಲುವು ಎಂದು ಘೋಷಿಸಿದ್ದರು. ಈ ಎಲ್ಲ ಘಟನೆಯ ಬಳಿಕ ಮಧ್ಯೆ ಪ್ರವೇಶಿಸಿದ ಐಸಿಸಿ ಪಂದ್ಯ ಡ್ರಾ ಎಂದು ಫಲಿತಾಂಶ ಬದಲಿಸಿತ್ತು.

ಎಂಟು ವರ್ಷಗಳ ಹಿಂದೆ ಪಾಕಿಸ್ತಾನ ತಂಡದ ಶಾಹಿದ್ ಅಫ್ರಿದಿ ಚೆಂಡು ವಿರೂಪಗೊಳಿಸಲು ಮೈದಾನದಲ್ಲಿಯೇ ಚೆಂಡನ್ನು ಕಚ್ಚಿದ್ದರು. ಆದರೆ ಅವರು ಪಂದ್ಯದ ರೆಫರಿ ಬಳಿ ಕ್ಷಮೆಯಾಚಿಸಿ ಶಿಕ್ಷೆಯಿಂದ ಪಾರಾಗಿದ್ದರು.

ಕಳೆದ ಐದಾರು ವರ್ಷಗಳಲ್ಲಿ ಚೆಂಡು ವಿರೂಪ ಮಾಡಿದ ಐದು ಘಟನೆಗಳು ನಡೆದಿವೆ. ದಕ್ಷಿಣ ಆಫ್ರಿಕಾದ ಫಾಫ್ ಡು ಪ್ಲೆಸಿಸ್ ಎರಡು ಸಲ ದಂಡ ಶಿಕ್ಷೆಗೆ ಗುರಿಯಾಗಿದ್ದಾರೆ. ಹೋದ ವರ್ಷ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಹೋಬರ್ಟ್ ಇದೇ ತಪ್ಪು ಮಾಡಿದ್ದರು.

### ಸಚಿನ್, ದ್ರಾವಿಡ್ ಹೊರತಲ್ಲ!

2001ರಲ್ಲಿ ಭಾರತ ತಂಡ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಿದ್ದ ವೇಳೆ ಸಚಿನ್ ತೆಂಡೂಲ್ಕರ್ ವಿರುದ್ಧ ಚೆಂಡು ವಿರೂಪದ ಆರೋಪ ಕೇಳಿಬಂದಿತ್ತು. ಪಂದ್ಯದ ರೆಫರಿ ಒಂದು ಪಂದ್ಯ ನಿಷೇಧ ಕೂಡ ಹೇರಿದ್ದರು. ಆದರೆ ಚೆಂಡಿಗೆ ಅಂಟಿಕೊಂಡಿದ್ದ ಹುಲ್ಲು ತೆಗೆಯಲು ಸಚಿನ್ ಪ್ರಯತ್ನಿಸಿದ್ದರು ಎಂಬುದು ವೀಡಿಯೊದಿಂದ ಸ್ಪಷ್ಟವಾಗಿತ್ತು. ಆ ಪಂದ್ಯಕ್ಕೆ ರೆಫರಿಯಾಗಿದ್ದ ಮೈಕ್ ಡೆನ್ನಿಸ್ ಭಾರತದ ಆಟಗಾರನದ್ದು ಯಾವುದೇ ತಪ್ಪಿಲ್ಲ ಎಂದಿದ್ದರು.

2004ರಲ್ಲಿ ರಾಹುಲ್ ದ್ರಾವಿಡ್ ಆಸ್ಟ್ರೇಲಿಯಾ ಎದುರು ಆಡುವಾಗ ಚೆಂಡಿನ ಮೇಲೆ ಉಗುಳು ಬಿದ್ದಿತ್ತು. ಅದನ್ನು ಉಜ್ಜಿದ್ದರಿಂದ ಪಂದ್ಯದ ಶೇಕಡಾ 50ರಷ್ಟು ಸಂಭಾವನೆಯ ದಂಡ ತೆತ್ತಿದ್ದರು.

ಹೀಗೆ ಅನೇಕ ಘಟನೆಗಳು ಕ್ರಿಕೆಟ್ ಇತಿಹಾಸದಲ್ಲಿ ಆಗಿ ಹೋಗಿವೆ. ಈಗ ಆಸ್ಟ್ರೇಲಿಯಾ ಮಾಡಿರುವ ತಪ್ಪನ್ನು ಗಂಭೀರವಾಗಿ ಪರಿಗಣಿಸಿ ನಿಷೇಧ ಶಿಕ್ಷೆ ಹೇರಿರುವುದು ಕ್ರಿಕೆಟ್ ಸಭ್ಯರ ಕ್ರೀಡೆಯಾಗಿಯೇ ಉಳಿಯಬೇಕು ಎಂಬ ಎಲ್ಲರ ಆಶಯಕ್ಕೆ ಸಾಕ್ಷಿಯಾಗಿದೆ.

ಮೈದಾನಕ್ಕೆ ಇಳಿಯುವ ಪ್ರತಿ ತಂಡಗಳಿಗೂ ಗೆಲ್ಲುವುದೇ ಉದ್ದೇಶವಾಗಿರುತ್ತದೆ. ಅದಕ್ಕಾಗಿಯೇ ಸಾಕಷ್ಟು ತಯಾರಿಯೂ ನಡೆಸಿರುತ್ತಾರೆ. 'ಪ್ರತಿ ಆಟಗಾರನಿಗೂ ಗೆಲ್ಲುವ ಗುರಿ ಮುಖ್ಯ, ಆದರೆ ಗೆಲುವಿಗಾಗಿ ಯಾವ ದಾರಿ ತುಳಿಯುತ್ತೇವೆ ಎನ್ನುವುದು ಅದಕ್ಕಿಂತಲೂ ಮುಖ್ಯ' ಎಂದು ಟ್ವೀಟ್ ಮಾಡಿರುವ ಸಚಿನ್ ತೆಂಡೂಲ್ಕರ್ ಮಾತು ಅರ್ಥಪೂರ್ಣವೆನಿಸುತ್ತದೆ.